



ಉಪಯೋಗಿಸಿಕೊಂಡು ಕಳ್ಳ ಬೇಟೆ ಅವ್ಯಾಹತವಾಗಿ ನಡೆಯುತ್ತಿದೆ. ಕಾಡಿನ ಅಂಚಿನಲ್ಲಿ ವಾಸಿಸುವ ಹಳ್ಳಿಗರು ಹಾಗೂ ಬುಡಕಟ್ಟು ಜನಾಂಗದವರು ಪ್ರಾಣಿಗಳನ್ನು ಬೇಟೆಯಾಡುವುದರಿಂದ ಹುಲಿಗಳಿಗೆ ಬೇಕಾದ ಆಹಾರದ ಪ್ರಾಣಿಗಳ ಸಂಖ್ಯೆ ಕಡಿಮೆಯಾಗಿ ಹುಲಿಗಳ ಸಂಖ್ಯೆಯು ಕಡಿಮೆಯಾಗುವುದು ಇನ್ನೊಂದು ಕಾರಣ. ಹಬ್ಬ ಹರಿದಿನಗಳಲ್ಲಿ ಮನರಂಜನೆಗೋಸ್ಕರ ಪ್ರಾಣಿಗಳ ವಧೆ ನಡೆಯುತ್ತವೆ. ಇದು ಹಳ್ಳಿಗರಿಗೆ ಸಂತೋಷ ತಂದರೂ ಹುಲಿಗಳಿಗೆ ಮಾರಕ. ವಾಹನಗಳು ಓಡಾಡುವ ಹೆದ್ದಾರಿಗಳು ಕಾಡಿನ ಮಧ್ಯೆ ಇರುವುದರಿಂದ ವೇಗವಾಗಿ ಚಲಿಸುವ ವಾಹನಗಳಿಗೆ ಸಿಕ್ಕು ಅಸುನೀಗುತ್ತವೆ.

ಮಾನವ ಮತ್ತು ಪ್ರಾಣಿಗಳ ನಡುವೆ ಮೊದಲು ಉತ್ತಮ ಸಂಬಂಧವಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಮಾನವ ಮತ್ತು ಪ್ರಾಣಿಗಳ ಸಂಘರ್ಷ ಹೆಚ್ಚಿದೆ. ಗೋವುಗಳನ್ನು ಕಾಡಿನಲ್ಲಿ ಮೇಯಿಸುವುದರಿಂದ ಅವುಗಳ ಜೊತೆ ಹೋದ ಮನುಷ್ಯರಿಗೂ ತೊಂದರೆಗಳು ಉಂಟಾಗುತ್ತಿವೆ. ಹುಲಿಗಳು ತಮ್ಮ ಆವಾಸಸ್ಥಾನದಲ್ಲಿ ಬೇರೆ ಚಟುವಟಕೆಗಳನ್ನು ಸಹಿಸುವುದಿಲ್ಲ . ಈ ಕಾರಣಕ್ಕೆ ಹುಲಿ ಮತ್ತು ಮಾನವನ ಸಂಘರ್ಷ ಹೆಚ್ಚುತ್ತಿದೆ. ಈ ಕಾರಣಕ್ಕೆ ಹುಲಿಗಳನ್ನು ಹಿಂಸೆ ಮಾಡಿ ಕೊಲ್ಲಲಾಗುತ್ತಿದೆ.

ಇತ್ತೀಚಿನ ದಿನಗಳಲ್ಲಿ ಪ್ರವಾಸಿಗರ ಉಪಟಳವೂ ಹೆಚ್ಚುತ್ತಿದೆ. ಹುಲಿಗಳನ್ನು ನೋಡಲು ಜನ ಮುಗಿಬೀಳುತ್ತಾರೆ. ಎಷ್ಟು ಹಣ ಖರ್ಚಾದರೂ ಪರವಾಗಿಲ್ಲ ಎಂಬ ಪ್ರವೃತ್ತಿ ಬೆಳೆಯುತ್ತಿದೆ. ಕಾಡು/ಹುಲಿಯನ್ನು ನೋಡಲು ಜನ ಹೆಚ್ಚಿದಂತೆಲ್ಲಾ ಅವಶ್ಯಕವಾದ ಅನುಕೂಲಗಳೂ ಬೇಕು. ವಸತಿ , ನೀರು, ರಸ್ತೆ, ವಿದ್ಯುತ್ ಇತರ ವ್ಯವಸ್ಥೆಗಳನ್ನು ಕಲ್ಪಿಸಲು ಕಾಡು ನಾಶವಾಗುತ್ತದೆ. ಇದರ ಜೊತೆಗೆ ಹೋಟೆಲ್‌ಗಳು, ರೆಸಾರ್ಟ್‌ಗಳು ಮತ್ತು ಇತರೆ ಸಂಬಂಧಪಟ್ಟ ಉದ್ಯಮಗಳೂ ತಲೆಯೆತ್ತುತ್ತಿವೆ.

ಪ್ರಾಣಿಸಂಗ್ರಹಾಲಯಗಳಲ್ಲೂ ಸಹ ಹುಲಿಗಳನ್ನು ಪಂಜರದಲ್ಲಿ ಕೂಡಿಡಲಾಗುತ್ತಿದೆ. ಇದು ಹುಲಿಗಳ ಮೂಲ ಪ್ರವೃತ್ತಿಗೆ ವಿರುದ್ಧ. ಇಲ್ಲಿಯ ಹುಲಿಗಳೂ ಸಾವನ್ನಪ್ಪುತ್ತಿವೆ. ಆಹಾರದ ಕೊರತೆ, ಮಲಿನವಾದ ಪರಿಸರ, ಸಾಕಷ್ಟು ಓಡಾಡಲು ಜಾಗವಿಲ್ಲದಿರುವುದು, ಕಲುಷಿತ ಆಹಾರ, ಕಾಯಿಲೆ, ಸೋಂಕು ಇತ್ಯಾದಿ ಕಾರಣಗಳಿಂದ ಹುಲಿಗಳು ಸಾವನ್ನಪ್ಪುತ್ತಿವೆ. ಹುಲಿಗಳ ಆರೋಗ್ಯಕ್ಕೆ ಓಡಾಟ, ಬೇಟೆ, ಪ್ರಕೃತಿದತ್ತವಾಗಿ ಸಿಗುವ ನೀರು ಬಹಳ ಅವಶ್ಯಕ. ಈ ಕಾರಣದಿಂದಾಗಿ ಹುಲಿಗಳು ಮಾನಸಿಕವಾಗಿ ನೊಂದು ಅವುಗಳ ಆರೋಗ್ಯ ಕ್ಷೀಣಿಸುತ್ತದೆ.

ಅರಣ್ಯವನ್ನು ಹಾಗೂ ಪ್ರಾಣಿಗಳನ್ನು ರಕ್ಷಿಸುವುದು, ಅರಣ್ಯ ರಕ್ಷಕರನ್ನು ನೇಮಿಸುವುದು, ಕಳ್ಳಸಾಗಣೆದಾರರಿಂದ ರಕ್ಷಣೆಗೆ ಅತ್ಯಾಧುನಿಕ ಆಯುಧಗಳನ್ನು ಒದಗಿಸುವುದು, ಅಗತ್ಯವಿರುವ ಗಸ್ತು ತಿರುಗಲು ಸೂಕ್ತ ವಾಹನಗಳನ್ನು ಒದಗಿಸುವುದು ಸರ್ಕಾರದ ಕರ್ತವ್ಯ. ಆದರೆ ಅರಣ್ಯ ರಕ್ಷಣೆ ಕೊನೆಯ ಆದ್ಯತೆಯಾಗಿದೆ. ಹಣದ ಕೊರತೆಯೂ ಒಂದು ಕಾರಣ. ಖಾಲಿಯಿರುವ ಅರಣ್ಯ ಸಿಬ್ಬಂದಿ ಹುದ್ದೆಗಳನ್ನು ಶೀಘ್ರವಾಗಿ ತುಂಬಬೇಕು. ಬೇಟೆಗಾರರು ಆಧುನಿಕ ಶಸ್ತ್ರಾಸ್ತ್ರ ಬಳಸುವುದರಿಂದ ಅರಣ್ಯ ಇಲಾಖೆ ಸಿಬ್ಬಂದಿಗಳಿಗೆ ಹಿನ್ನಡೆಯಾಗುತ್ತಿದೆ. ಭ್ರಷ್ಟಾಚಾರವೂ ಒಂದು ಕಾರಣ .

ಅರಣ್ಯ ಇಲಾಖೆ ಸಿಬ್ಬಂದಿಗಳು ಅಪರಾಧಿಗಳನ್ನು ಹಿಡಿದಾಗ ಅವರಿಗೆ ನೀಡುವ ಶಿಕ್ಷೆ ಬಹಳ ಕಡಿಮೆ . ಇದರಿಂದ ಅಪರಾಧಿಗಳು ಮತ್ತೆ ಅದೇ ದಂಧೆಯಲ್ಲಿ ತೊಡಗುತ್ತಾರೆ. ಕಠಿಣ ಕ್ರಮಕ್ಕೆ ಬೇಕಾದ ಸೂಕ್ತ ಕಾನೂನನ್ನು ಸರ್ಕಾರ ರಚಿಸಿದರೆ ಕಾಡು ಹಾಗೂ ಕಾಡು ಪ್ರಾಣಿಗಳು ಉಳಿಯತ್ತವೆ. ಹುಲಿ ಸಂತತಿ ವೃದ್ಧಿಸುತ್ತದೆ.

ಹುಲಿಗಳನ್ನು ಉಳಿಸಲು ಪ್ರಯತ್ನಗಳು ನಡೆಯುತ್ತಲೇ ಇವೆ. ಈ ಕಾಲಮಾನದಲ್ಲಿ ಹುಲಿ ಸಂರಕ್ಷಣೆಗೆ ಹಾಗೂ ಹುಲಿಗಳು ವಾಸಿಸುವ ಸ್ಥಳಗಳ ಅಭಿವೃದ್ಧಿ ಬಹಳ ಮುಖ್ಯ. ಈ ನಿಟ್ಟಿನಲ್ಲಿ ಮಾಡಬೇಕಾದ ಕೆಲಸ ಬಹಳಷ್ಟಿದೆ. ಜನರಲ್ಲಿ ಜಾಗೃತಿ ಮೂಡಿಸುವ ಅಗತ್ಯ ಈಗ ಹೆಚ್ಚಾಗಿದೆ. ಶಾಲಾ ಕಾಲೇಜುಗಳಲ್ಲಿ ಹುಲಿಗಳ ಅಭಿಯಾನ, ಅವುಗಳ ಜೀವನ ಕ್ರಮದ ಬಗ್ಗೆ ಮಕ್ಕಳಿಗೆ ತಿಳಿಸಿ, ಛಾಯಾಚಿತ್ರ ಪ್ರದರ್ಶನ ಮಾಡುವುದು ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

ಬುಡಕಟ್ಟು ಜನರಿಗೆ ಹಾಗೂ ಹಳ್ಳಿಗರಿಗೆ ಅರಣ್ಯ, ಪ್ರಾಣಿ ಪಕ್ಷಿಗಳು, ಪರಿಸರ ರಕ್ಷಣೆ ಬಗ್ಗೆ ತಿಳಿ ಹೇಳುವುದು ಉತ್ತಮ. ಕಾನೂನು ಬಾಹಿರವಾಗಿ ಬೇಟೆಯಾಡುವುದನ್ನು ತಡೆಯಬೇಕು. ಅರಣ್ಯದ ಅಂಚಿನಲ್ಲಿರುವ ಜನರು ಪ್ರಾಣಿಗಳನ್ನು ಕೊಲ್ಲದಿರುವಂತೆ ನೋಡಿಕೊಳ್ಳುವುದು, ಬೆಂಕಿಯಿಂದ ಕಾಡನ್ನು ರಕ್ಷಿಸುವುದು, ಗಣಿಗಾರಿಕೆ ಮತ್ತು ಇತರೆ ವಾಣಿಜ್ಯ ಚಟುವಟಿಕೆಗಳನ್ನು ತಡೆಯುವುದು, ಸರ್ಕಾರದ ಕಾರ್ಯಕ್ರಮಗಳನ್ನು ಉತ್ತಮವಾಗಿ ನಿರ್ವಹಿಸುವುದು, ಅರಣ್ಯವಾಸಿಗಳನ್ನು ಮನವೊಲಿಸಿ ಸ್ಥಳಾಂತರಗೊಳಿಸುವುದು ಆಗಬೇಕಾದ ಕೆಲಸ.

ಅರಣ್ಯ ಅಧಿಕಾರಿಗಳಿಗೆ ಫಾರೆಸ್ಟ್ ಮ್ಯಾನೇಜ್‌ಮೆಂಟ್ ಪ್ಲಾನ್, ಹುಲಿಗಳ ಬಗ್ಗೆ ಕಮ್ಮಟಗಳನ್ನು ನಡೆಸುವುದು, ಅರಣ್ಯದ ಅಂಚಿನಲ್ಲಿರುವವರಿಗೆ ಎಲ್.ಪಿ.ಜಿ. ಗ್ಯಾಸ್ ಕೊಡುವುದು, ಉತ್ತಮವಾದ ಗಸ್ತು ವಾಹನಗಳು ಮತ್ತು ಶಸ್ತ್ರಾಸ್ತ್ರಗಳನ್ನು ಒದಗಿಸುವುದು, ಬೆಳೆ ನಾಶಕ್ಕೆ ಶೀಘ್ರವಾಗಿ ಪರಿಹಾರ ಒದಗಿಸುವುದು– ಅತಿ ಮುಖ್ಯ ಅಗತ್ಯಗಳು. ಇವುಗಳಲ್ಲಿ ಕೆಲವು ಯೋಜನೆಗಳು ಜಾರಿಯಲ್ಲಿವೆ. ಇನ್ನಷ್ಟು ಕೆಲಸಗಳು ಆಗಬೇಕಿದೆ.